

# ಕಲ್ಲಿನ ಅಣಬೆ!



ಪ್ರಕೃತಿ ವಿಸ್ಮಯಗಳ ಆಗರ. ಇದರೊಳಗೆ ನೈಸರ್ಗಿಕವಾಗಿ ರೂಪುಗೊಂಡ ಅನೇಕ ಅದ್ಭುತಗಳಿವೆ.

ಬಲ್ಗೇರಿಯಾ ದೇಶದಲ್ಲಿರುವ ಬೆಲಿ ಪ್ಲಾಸ್ಟ್ ಎಂಬ ಹಳ್ಳಿಯಲ್ಲಿ ನೋಡಲು ಥೇಟ್ ಅಣಬೆ (ನಾಯಿ ಕೊಡೆ)ಗಳಂತೆ ಕಾಣುವ ಕಲ್ಲುಬಂಡೆಗಳು ಕಾಣಸಿಗುತ್ತವೆ. ಅಣಬೆಯಾಕಾರದ ಸುಮಾರು ಒಂದು ಡಜನ್‌ನಷ್ಟು ಸುಣ್ಣದಕಲ್ಲಿನ ಬಂಡೆಗಳು ಇಲ್ಲಿವೆ.

ಸಾವಿರಾರು ವರ್ಷಗಳ ಹಿಂದೆ, ನೀರಿನಿಂದ ಉಂಟಾದ ಭೂಸವಕಳಿಯಿಂದ ಈ ನಾಯಿಕೊಡೆಗಳಂತಹ ರಚನೆಗಳು ಆಗಿರಬಹುದೆಂದು ಅಂದಾಜು ಮಾಡಲಾಗಿದೆ. ಆದರೆ ಈಗ ಯಾವುದೇ ನೀರಿನ ಸೆಲೆ ಇಲ್ಲ. ಕಲ್ಲಿನ ನಾಯಿಕೊಡೆಗಳ ತಾಣ ಮಾತ್ರ ದೇಶ, ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

★ **ಪ್ರಿಯಾಂಕ ವಿ.ಹೆಚ್.**